# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ, ವಿಜಯನಗರ ಉಪ ವಿಭಾಗ

## ವಾರ್ಡ್ ನಂ. 157 : ವಿಜಯನಗರ

ದಿನಾಂಕ:05.11.2022 ರಂದು 12.30 ಗಂಟೆಗೆ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ, ವಾರ್ಡ್ ನಂ.157 (ಹಳೆಯ ವಾರ್ಡ್ ನಂ. 123) ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಉಪ ವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1. | ಶ್ರೀ.ಡಿ.ಕೆ.ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀ.ಎಸ್.ಕೆ.ಹೇಮಂತ್ ಕುಮಾರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 157. |
| 3. | ಶ್ರೀಮತಿ.ಸುಜಾತ | ಹಿರಿಯ ಆರೋಗ್ಯ ಪರಿವೀಕ್ಷಕರು. |
| 4. | ಶ್ರೀಮತಿ.ಸಪ್ನ | ಕಿರಿಯ ಆರೋಗ್ಯ ಪರಿವೀಕ್ಷಕರು. |
| 5. | ಶ್ರೀಮತಿ.ಸುಮಿತ್ರ ಬಿ.ಎಸ್ | ಮೌಲ್ಯಮಾಪಕರು. |
| 6. | ಶ್ರೀಮತಿ.ನಾಗರತ್ನಮ್ಮ | L/W ವಾ–157. |
| 7. | ಶ್ರೀ.ಸುಬ್ರಮಣಿ | ವಾ–157. |
| 8. | ಶ್ರೀ.ಗೋಪಾಲನಾಯ್ಕ | Marshal ವಾ–157. |
| 9. | ಶ್ರೀ.ಚಂದ್ರಕಲಾ | Depot Manager (BMTC) |
| 10. | ಕುಮಾರಿ.ವಿದ್ಯಾ ಹಿರೇಮಠ | NGO |

### : ನಡಾವಳಿಯ ವರದಿ :

ಕಾರ್ಯದರ್ಶಿಗಳಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ನೋಡಲ್ ಅಧಿಕಾರಿಯವರಿಗೆ ಹಾಗೂ ಅಧಿಕಾರಿಗಳು ಮತ್ತು ನೌಕರರಿಗೆ ಸ್ವಾಗತ ಕೋರಿದರು.

1. 6ನೇ ಮುಖ್ಯರಸ್ತೆ, ಸರ್ವಿಸ್ ರಸ್ತೆ ಮತ್ತು ವಾರ್ಡ್‌ನ ಪ್ರಮುಖ ರಸ್ತೆಗಳಲ್ಲಿ ರಸ್ತೆಗುಂಡಿಗಳ ಬಗ್ಗೆ ಪರಿವೀಕ್ಷಣೆ ಕೈಗೊಳ್ಳಲು ನೋಡಲ್ ಅಧಿಕಾರಿ ರವರು ಕಾರ್ಯದರ್ಶಿ ರವರಿಗೆ ಸೂಚಿಸಿದರು.

   **ಕ್ರಮ: ಸಹಾಯಕ ಅಭಿಯಂತರರು ವಾರ್ಡ್ ನಂ.123.**

2. ಮನುವನ Junction, Giraffe Park, Water Plant road ಮತ್ತು ವಿದ್ಯಾರಣ್ಯನಗರದ ಬಳಿ De-Silting ಕಾಮಗಾರಿಯನ್ನು ಕೈಗೊಂಡಿರುವುದಾಗಿ ಕಾರ್ಯದರ್ಶಿ ರವರು ಸಭೆಯ ಗಮನಕ್ಕೆ ತಂದರು. ಅದಕ್ಕೆ ನೋಡಲ್ ಅಧಿಕಾರಿ ರವರು De-Silting ಕಾಮಗಾರಿಯ Completion Report ನೀಡಲು ಕಾರ್ಯದರ್ಶಿ ರವರಿಗೆ ಸೂಚಿಸಿದರು.

   **ಕ್ರಮ: ಸಹಾಯಕ ಅಭಿಯಂತರರು ವಾರ್ಡ್ ನಂ.123.**

3. GT Mall ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿ, Pannel Advocate ನ್ನು ಬದಲಾಯಿಸಿ ನ್ಯಾಯಾಲಯದಲ್ಲಿ ಹೂಡಿರುವ ದಾವೆಯನ್ನು ಮುಂದೂಡುತ್ತಿರುವುದಾಗಿ ಕಂದಾಯ ಅಧಿಕಾರಿಗಳು, ನೋಡಲ್ ಅಧಿಕಾರಿ ರವರು

ಗಮನ್ನಕೆ ತಂದರು. ಅದಕ್ಕೆ ನೋಡಲ್ ಅಧಿಕಾರಿ ರವರು ದಾವೆಯನ್ನು ಉದ್ದೇಶಿಸಿ ಮುಂದಿನ ದಿನಗಳಲ್ಲಿ ನ್ಯಾಯಾಲಯದಲ್ಲಿ ಜರುಗಿಸುವ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಕಂದಾಯ ಅಧಿಕಾರಿ ರವರಿಗೆ ಸೂಚಿಸಿದರು.

<u>ಕ್ರಮ: ಸಹಾಯಕ ಕಂದಾಯ ಅಧಿಕಾರಿ.</u>

4. Aadhar Card ನ್ನು Voter ID card ಗೆ Linking ಮಾಡುವ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಿ ಹಾಗೂ Banners ಗಳನ್ನು ಅಳವಡಿಸುವಂತೆ ನೋಡಲ್ ಅಧಿಕಾರಿ ರವರು ಮೌಲ್ಯಮಾಪಕರಿಗೆ ಸೂಚಿಸಲಾಗಿ, ಅದಕ್ಕೆ ಮೌಲ್ಯಮಾಪಕರು ವಾರ್ಡ್‌ನಲ್ಲಿ ನಿರಂತರವಾಗಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುತ್ತಿರುವುದಾಗಿ ನೋಡಲ್ ಅಧಿಕಾರಿ ರವರು ಗಮನಕ್ಕೆ ತಂದರು.

<u>ಕ್ರಮ: ಸಹಾಯಕ ಕಂದಾಯ ಅಧಿಕಾರಿ.</u>

5. Plastic ನಿಷೇದದ ವಿಚಾರದ ಬಗ್ಗೆ ಚರ್ಚಿಸಲಾಗಿ, ವಿಜಯನಗರ ಮಾರುಕಟ್ಟೆಯ ಅಂಗಡಿ ಮಾಲೀಕರಿಗೆ ಹಾಗೂ ಸಾರ್ವಜನಿಕರಿಗೆ ತಿಳುವಳಿಕೆ ನೀಡುವಂತೆ, ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಹಾಗೂ Marshal (ವಾ–157) ರವರಿಗೆ ನೋಡಲ್ ಅಧಿಕಾರಿಯವರ ಸೂಚಿಸಿದರು.

<u>ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು Marshal (ವಾ–157)</u>

6. ಕುಮಾರಿ.ವಿದ್ಯಾ ಹಿರೇಮಠ ರವರು Public Grievance Box ಸ್ಥಾಪಿಸಲು ಹಿಂದಿನ ಸಭೆಯಲ್ಲಿ ಕೋರಲಾಗಿ, ಅದಕ್ಕೆ ಕಾರ್ಯದರ್ಶಿ ರವರು ಈಗಾಗಲೇ ಬಿ.ಬಿ.ಎಂ.ಪಿ ವತಿಯಿಂದ, ಸಾರ್ವಜನಿಕರ ಕೊಂದು ಕೊರತೆ ನಿರ್ವಹಣೆ ಕೇಂದ್ರವನ್ನು ಸ್ಥಪಿಸಲಾಗಿರುತ್ತದೆ ಹಾಗೂ ವಾರ್ಡ್ ಕಛೇರಿಯ ಮುಂದೆ Boardನ್ನು ಅಳವಡಿಸಲಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

<u>ಕ್ರಮ: ಸಹಾಯಕ ಅಭಿಯಂತರರು ವಾರ್ಡ್ ನಂ.123.</u>

7. ಕುಮಾರಿ.ವಿದ್ಯಾ ಹಿರೇಮಠ ರವರು ವಿಜಯನಗರ ಬಸ್ ನಿಲ್ದಾಣ, ವಿಜಯನಗರ ಕೆಳ ಸೇತುವೆ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಮಳೆ ನೀರು ಶೇಖರಣೆಯಾಗುತ್ತಿದ್ದು, ಅದನ್ನು ಸರಿಪಡಿಸಿ ಕೊಡಲು ಸಭೆಯಲ್ಲಿ ಕೋರಿದರು. ಅದಕ್ಕೆ ನೋಡಲ್ ಅಧಿಕಾರಿಯವರು, ಸದರಿಯವರು ಕೋರಿರುವ ಸಮಸ್ಯೆಯನ್ನು ಬಗೆಹರಿಸಲು ಕಾರ್ಯದರ್ಶಿ ರವರಿಗೆ ಸೂಚಿಸಿದರು.

<u>ಕ್ರಮ: ಸಹಾಯಕ ಅಭಿಯಂತರರು ವಾರ್ಡ್ ನಂ.123.</u>

8. ಉಡುಪಿ ಕಿಚನ್ ಹೊಟೇಲ್ ಬಳಿ ಅಳವಡಿಸಿರುವ Barricade ನ್ನು ತೆರವುಗೊಳಿಸಿ, ಸಾರ್ವಜನಿಕರ ವಾಹನ ಸಂಚಾರಕ್ಕೆ ಅನುಕೂಲಮಾಡಿಕೊಡಲು ಕೀರಿಯ ಆರೋಗ್ಯ ಪರಿವೀಕ್ಷಕರವರು ಸಭೆಯಲ್ಲಿ ಕೋರಿದರು, ಅದಕ್ಕೆ ನೋಡಲ್ ಅಧಿಕಾರಿಯವರು, ಸದರಿಯವರು ಕೋರಿರುವ ಸಮಸ್ಯೆಯನ್ನು ಬಗೆಹರಿಸಲು ಕಾರ್ಯದರ್ಶಿ ರವರಿಗೆ ಸೂಚಿಸಿದರು.

<u>ಕ್ರಮ: ಸಹಾಯಕ ಅಭಿಯಂತರರು ವಾರ್ಡ್ ನಂ.123.</u>

9. ಮಾಗಡಿ ಮುಖ್ಯರಸ್ತೆಯಲ್ಲಿ Intensive Cleaning ಕಾಮಗಾರಿಯನ್ನು ನಿರ್ವಹಿಸಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ನೋಡಲ್ ಅಧಿಕಾರಿ ರವರು ಗಮನಕ್ಕೆ ತಂದರು.

<u>ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು.</u>

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ–ವಾರ್ಡ್ 157**
**ಹಾಗೂ ಸಹಾಯಕ ಅಭಿಯಂತರರು,**

(ಡಿ.ಕೆ.ಬಾಬು)
**ನೋಡಲ್ ಅಧಿಕಾರಿ ವಾರ್ಡ್–157**

**<u>ಪ್ರತಿಯನ್ನು:–</u>**

1) ಜಂಟಿ ಆಯುಕ್ತರು, ದಕ್ಷಿಣ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ವಿಜಯನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.157 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಸಹಾಯಕ ಅಭಿಯಂತರರು ವಿದ್ಯುತ್ (ಬೀದಿ ದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಕಛೇರಿ ಕಡತಕ್ಕೆ.